ಸಂಖ್ಯೆ:ಎಂ1/ಎಂಎನ್‌ಜಿ/ಎನ್‌ಎಂಡಿಸಿ/ಎಂಎಲ್.1111/2017-18

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬಳ್ಳಾರಿ ವಿಭಾಗ, ಬಳ್ಳಾರಿ.
ದಿನಾಂಕ: 06.03.2018.

ಇವರಿಗೆ

ಮೆ॥. ಎನ್.ಎಂ.ಡಿ.ಸಿ.
ಎಂ.ಎಲ್.ನಂ.1111,
ದೋಣಿಮಲೈ ಟೌನ್‌ಶಿಫ್,
ದೋಣಿಮಲೈ ಸಂಡೂರು

ಮಾನ್ಯರೆ,

ವಿಷಯ : ಮೆ॥. ಎನ್.ಎಂ.ಡಿ.ಸಿ. ಎಂ.ಎಲ್.ನಂ.1111 ಇವರು ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಉಲ್ಲಂಘನೆ ಕುರಿತು.

ಉಲ್ಲೇಖ :1) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ಉಪವಿಭಾಗ, ಬಳ್ಳಾರಿ ಇವರ ಪತ್ರ ಸಂಖ್ಯೆ : ಎಸಿಎಫ್/ಎಸ್.ಡಿ/ಬಿಎಲ್‌ವೈ/ಎನ್‌ಎಂಡಿಸಿ/ಉ/2017-18 ದಿನಾಂಕ:16.11.2017.

2) ಈ ಕಛೇರಿ ಇದೇ ಕ್ರಮಾಂಕದ ಪತ್ರ ಸಂಖ್ಯೆ ದಿನಾಂಕ : 05.12.2017

3) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರ ಪತ್ರ ಸಂಖ್ಯೆ : ಎಂ1/ಎಂಎನ್‌ಜಿ/ನವೀ/ಸಿಆರ್-11/1990-1991(ಎಂಹೆಚ್‌ಅರ್) ದಿನಾಂಕ : 08.01.2018 ಮತ್ತು 19.02.2018

* * * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ಉಪವಿಭಾಗ, ಬಳ್ಳಾರಿ ಇವರು ಉಲ್ಲೇಖ(1) ರ ಪತ್ರದ ಮೂಲಕ ವರದಿ ಸಲ್ಲಿಸುತ್ತಾ, ನಿಮ್ಮ ಎಂ.ಎಲ್.ನಂ.1111 ರ ದೋಣಿಮಲೈ ಅರಣ್ಯ ಪ್ರದೇಶದಲ್ಲಿ 341.20 ಹೇಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಸೆಕ್ಷನ್-2 ರಡಿಯಲ್ಲಿ ಅನುಮೋಧನೆ ಪಡೆದು ಗಣಿಗಾರಿಕೆ ನಡೆಸುತ್ತಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಧಿಸಿರುವ ಷರತ್ತು ಸಂಖ್ಯೆ : 2(ii), 4, 5 11, 20, 22, 24 ಮತ್ತು 26 ಗಳ ಉಲ್ಲಂಘನೆಯಾಗಿರುತ್ತದೆ. ಈ ಕುರಿತು ನಿಮ್ಮ ಕಂಪನಿ ವಿರುದ್ಧ ಅರಣ್ಯ ಮೊಕದ್ದಮೆ ಸಂಖ್ಯೆ:06/2014-15 ದಿನಾಂಕ:29.10.2014 ಮತ್ತು 03/2017-18 ದಿನಾಂಕ: 19.10.2017 ಗಳನ್ನು ದಾಖಲಿಸಲಾಗಿರುತ್ತದೆ.

ಮುಂದುವರೆದು, ನಾನು ಸಹ ದಿನಾಂಕ:10.10.2017 ರಂದು ಸದರಿ ಸ್ಥಳ ಪರಿಶೀಲಿಸಿದಾಗ, ಮೆ॥. ಎನ್.ಎಂ.ಡಿ.ಸಿ. ಎಂ.ಎಲ್.ನಂ.1111 ಸಂಡೂರು, ಇವರಿಗೆ ಗಣಿಗಾರಿಕೆ ನಡೆಸಲು ಅನುಮತಿ ನೀಡಿದ ಪ್ರದೇಶವನ್ನು ಹೊರತುಪಡಿಸಿ ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಸೆಕ್ಷನ್-2 ರಡಿಯಲ್ಲಿ ಅನುಮೋಧನೆ ಪಡೆಯದ ಅರಣ್ಯ ಪ್ರದೇಶದಲ್ಲಿ ಚೈನ್‌ಲಿಂಕ್ ನಿರ್ಮಾಣ ಮಾಡಿರುವುದು, ಖಾಯಂ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಅರಣ್ಯ ಇಲಾಖೆ ಮೇಲಾಧಿಕಾರಿಗಳು ಗಣಿಗುತ್ತಿಗೆ ಪ್ರದೇಶದ ಸ್ಥಳ ಪರಿಶೀಲನೆಗೆ ಬಂದಾಗ ಸ್ಥಳ ಪರಿಶೀಲನೆ ಹೋಗುವ ದಾರಿಯಲ್ಲಿ ಚೈನ್‌ಲಿಂಕ್ ನಿರ್ಮಾಣ ಮತ್ತು ಗೇಟ್ ನಿರ್ಮಾಣ ಮಾಡಿದ್ದು, ಮೇಲಾಧಿಕಾರಿಗಳು ಅರಣ್ಯ ಪ್ರದೇಶದ ಒಳಗೆ ಪ್ರವೇಶಿಸಲು ನಿಮ್ಮ ಸಿಬ್ಬಂದಿಗಳು ಅಡ್ಡಪಡಿಸಿರುತ್ತಾರೆ.

ಈ ರೀತಿ ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಸೆಕ್ಷನ್-2 ರಡಿಯಲ್ಲಿ ಅನುಮೋಧನೆ ಪಡೆಯದ ಅರಣ್ಯ ಪ್ರದೇಶದಲ್ಲಿ ಚೈನ್‌ಲಿಂಕ್ ನಿರ್ಮಾಣ ಮಾಡಿರುವುದು, ಖಾಯಂ ಕಟ್ಟಡಗಳನ್ನು ನಿರ್ಮಾಣ ಮಾಡಿರುವುದು ಅರಣ್ಯ ಸಂರಕ್ಷಣಾ ಕಾಯ್ದೆ, 1980 ರ ಉಲ್ಲಂಘನೆಯಾಗಿರುತ್ತದೆ. ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಧಿಸಿರುವ ಷರತ್ತು ಸಂಖ್ಯೆ : 2(II), 4, 5 11, 20, 22, 24 ಮತ್ತು 26 ಗಳ ಉಲ್ಲಂಘನೆಯಾಗಿರುತ್ತದೆ.

ಆದುದರಿಂದ, ಅಕ್ರಮವಾಗಿ ನಿರ್ಮಿಸಿರುವ ಚೈನ್‌ಲಿಂಕ್ ನಿರ್ಮಾಣ ಮಾಡಿರುವುದು, ಖಾಯಂ ಕಟ್ಟಡಗಳನ್ನು ತೆರವುಗೊಳಿಸುವವರೆಗೂ ಹಾಗೂ ನಿಮ್ಮ ವಿರುದ್ಧ ದಾಖಲಾಗಿರುವ ಈ ಮೇಲ್ಕಂಡ ಪ್ರಕರಣಗಳು ಇತ್ಯರ್ಥವಾಗುವವರೆಗೂ ನಿಮ್ಮ ಕಂಪನಿಗೆ ಸಂಬಂಧಿಸಿದ ಯಾವುದೇ ಪ್ರಸಾವನೆಗಳನ್ನು ಪರಿಗಣಿಸುವುದಿಲ್ಲವೆಂಬ ಅಂಶವನ್ನು ನಿಮಗೆ ತಿಳಿಸಿದೆ.

ತಮ್ಮ ವಿಶ್ವಾಸಿ
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ

1) ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ), ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3) ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ಇವರ ಮಾಹಿತಿಗಾಗಿ ಸಲ್ಲಿಸಿದೆ.
4) ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ಉಪವಿಭಾಗ, ಬಳ್ಳಾರಿ ಇವರ ಮಾಹಿತಿಗಾಗಿ ಕಳುಹಿಸಿದೆ.
5) ಪ್ರತಿಯನ್ನು ವಲಯ ಅರಣ್ಯಾಧಿಕಾರಿ, ಸಂಡೂರು ದಕ್ಷಿಣ ವಲಯ, ಸಂಡೂರು ಇವರ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ

o/c

ರವಾನಿಸಲಾಗಿದೆ.
ದಿನಾಂಕ 12/03/2018
ಸಹಿ